ಕಾಯುತ್ತಾ ಅವನನ್ನೇ ತಿನ್ನುವಂತೆ ನೋಡುತ್ತಾ ಕುಳಿತುಬಿಟ್ಟಿತು. ಉಳಿದ ನಾಲ್ಕು ಪುಟ್ಟ ಮರಿಗಳೂ ಆ ಮನುಷ್ಯನನ್ನೇ ನೋಡುತ್ತಾ ಕುಳಿತವು.

ಪಶುಪಾಲಕನಿಗೆ ಜೀವ ಬಾಯಿಗೆ ಬಂದಂತಾಗಿತ್ತು. ಹೆಬ್ಬುಲಿ ಬದುಕಿಕೊಂಡಿದ್ದಲ್ಲದೆ ತನ್ನನ್ನೇ ತಿನ್ನುವಂತೆ ನೋಡುತ್ತಾ ಕುಳಿತಿದೆ. ಏನು ಮಾಡುವುದು? ಹೇಗೆ ಪಾರಾಗುವುದು? ಏನೂ ತೋಚದೆ ಅವನೂ ಹಾಗೇ ಹುಲಿಯನ್ನು ನೋಡುತ್ತಾ ಕುಳಿತ. ದೃಷ್ಟಿ ಯುದ್ಧ ಮಾಡುವಂತೆ ಮನುಷ್ಯ ಮತ್ತು ಹುಲಿ ಇಬ್ಬರೂ ಹಾಗೇ ಪರಸ್ಪರ ನೋಡುತ್ತಾ ಕುಳಿತರು. ಪಶುಪಾಲಕನ ಹಸುಗಳು ಹೊಟ್ಟೆ ತುಂಬಾ ಮೇಯ್ದು ಮನೆಕಡೆ ಹೊರಟವು. ಸಂಜೆಯಾಗಿ ಹೊತ್ತು ಮುಳುಗುವ ಸಮಯವಾಯಿತು. ಪಶ್ಚಿಮ ದಿಕ್ಕಿನಲ್ಲಿ ಸೂರ್ಯ ಕೆಂಡದ ಉಂಡೆಯಾಗಿ ಮುಳುಗತೊಡಗಿದ. ಆದರೂ ಹೆಬ್ಬುಲಿ ಅಲುಗಾಡಲಿಲ್ಲ. ರಾತ್ರಿಯಾಯಿತು, ಕಗ್ಗತ್ತಲು ಕವಿಯಿತು. ಕಾರ್ಮೋಡ ಆವರಿಸಿತು, ಮಳೆ ಸುರಿಯಿತು. ಗುಡುಗು ಮಿಂಚು ಸಿಡಿಲುಗಳ ಆರ್ಭಟವೂ ಆಯಿತು. ಹುಲಿ ಅಲುಗಾಡಲಿಲ್ಲ. ಪಶುಪಾಲಕನೂ ಕೋಡುಗಲ್ಲಿನ ಮೇಲೆ ಹಾಗೇ ಕುಳಿತ. ಪೂರ್ವದಲ್ಲಿ ಬೆಳಕಾಯಿತು, ಸೂರ್ಯನೂ ಉದಯಿಸಿದ. ಹುಲಿ ದೃಷ್ಟಿನೆಟ್ಟು ಕಾಯುತ್ತಲೇ ಇದೆ. ಪಶುಪಾಲನೂ ಹುಲಿಯ ಕಣ್ಣನ್ನೇ ನೋಡುತ್ತಾ ಕುಳಿತಿದ್ದಾನೆ!

ಇಪ್ಪತ್ನಾಲ್ಕು ಜಾವ, ಇಪ್ಪತ್ನಾಲ್ಕು ಗಳಿಗೆ ಹೀಗೇ ಕುಂತ ಹುಲಿ ಮತ್ತು ಮನುಷ್ಯ ಒಂದರ ಮನಸ್ಸನ್ನು ಒಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರು. ಮನದ ಭಾಷೆ ಇಬ್ಬರಿಗೂ ಅರ್ಥವಾಗತೊಡಗಿತು. ಆಗ ಹುಲಿಯೇ ಮೊದಲು ಮಾತನಾಡಿತು. 'ಎಲವೋ ಕ್ರೂರ ಮನುಷ್ಯ, ನೀನು ನನ್ನ ಮುದ್ದು ಕಂದನನ್ನು ಕೊಂದದ್ದು ಎಷ್ಟು ಸರಿ?' ಆಗ ಮನುಷ್ಯ ಹೇಳಿದ, 'ಎಲವೋ ಕ್ರೂರ ಹುಲಿಯೇ, ನೀನು ನನ್ನ ಹಸುಗಳನ್ನು ಕೊಂದು ತಿಂದದ್ದು ಮಾತ್ರ ಸರಿಯೇ?' ಆಗ ಹುಲಿ, 'ದೇವರು ನನ್ನನ್ನು ಮಾಂಸಾಹಾರಿಯಾಗಿ ಸೃಷ್ಟಿಸಿದ್ದಾನೆ. ನಾನು ಜೀವ ಉಳಿಸಿಕೊಳ್ಳುವುದಕ್ಕಾಗಿ ಇತರೆ ಪ್ರಾಣಿಗಳನ್ನು ತಿನ್ನುತ್ತೇನೆ. ನನ್ನನ್ನು ಹುಟ್ಟಿಸಿದ ದೇವರು ನನಗೆ ಹುಲ್ಲು ಮೇಯ್ದು ಬದುಕು ಎಂದು ಹೇಳಿಲ್ಲ' ಎಂದು ಮಾರುತ್ತರ ನೀಡಿತು. ಆಗ ಮನುಷ್ಯ, 'ನಾನು ಮತ್ತು ನನ್ನ ಕುಟುಂಬ ಬದುಕುತ್ತಿರುವುದೇ ಹಸುಗಳ ಹಾಲು ಮೊಸರನ್ನು ಉತ್ಪಾದಿಸುವ ಮೂಲಕ, ಅದೇ ನಮಗೆ ಜೀವನಾಧಾರ. ಹಾಗಿರುವಾಗ ನನ್ನ ಬದುಕಿಗೆ ಸಂಕಷ್ಟ ತಂದ ನಿನ್ನನ್ನು ಸುಮ್ಮನೆ ಬಿಡಬೇಕೇ?' ಆಗ ಹುಲಿ, 'ಹಾಗಿದ್ದರೆ, ನೀನು ನನ್ನನ್ನು ಕೊಲ್ಲಬೇಕಾಗಿತ್ತು. ನಿರಪರಾಧಿಯಾದ ನನ್ನ ಕಂದನನ್ನು ಅಲ್ಲ, ನೀವು ಮನುಷ್ಯರು ಬಹಳ ಬುದ್ಧಿವಂತರು ಎಂದು ಹೇಳುತ್ತೀರಿ, ಆದರೆ ಹಸುಗೂಸನ್ನು ಬಿಡದೆ ಕೊಲ್ಲುವುದು ನ್ಯಾಯವೇ?' ಎಂದು ಮಾರ್ಮಿಕವಾಗಿ ಕೇಳುತ್ತಾ ಕಣ್ಣೀರುಗೆರೆಯಿತು. ಈ ಪ್ರಶ್ನೆಗೆ ಪಶುಪಾಲಕನ ಬಳಿ ಉತ್ತರವಿರಲಿಲ್ಲ. ಹುಲಿಯ ಕಣ್ಣೀರಿನ ಜೊತೆ ತಾನೂ ಕಣ್ಣೀರು ಹಾಕುತ್ತಾ ಕುಳಿತ. ಇದೀಗ ಇಬ್ಬರ ಹೃದಯಗಳೂ ಕರಗಿದವು. ದ್ವೇಷ ಮರೆಯಾಯಿತು. ಇಬ್ಬರೂ ಕುಂತು ಸಮಾಲೋಚನೆ ಮಾಡಿದರು. ಈ ಕಾಡು ಇಬ್ಬರಿಗೂ ಸೇರಿದ್ದು. ಇಬ್ಬರಿಗೂ ಇಲ್ಲಿ ಬದುಕುವ ಹಕ್ಕಿದೆ. ಆದ್ದರಿಂದ ಇಬ್ಬರ ಜೀವನಕ್ಕೂ ತೊಂದರೆ ಇಲ್ಲದಂಥ ಒಂದು ಒಪ್ಪಂದಕ್ಕೆ ಬರೋಣ ಎಂದು ಮಾತಾಡಿಕೊಂಡರು.

ಹಾಗಾದರೆ ಹುಲಿ ಮತ್ತು ಮನುಷ್ಯನ ನಡುವಿನ ಒಪ್ಪಂದ ಏನಿತ್ತು? ಇಲ್ಲಿಂದ ಮುಂದೆ ನಾವು ಕಚ್ಚಾಡುತ್ತಾ ಹುಲಿ ಮರಿಗಳನ್ನಾಗಲೀ ದನಗಳನ್ನಾಗಲಿ ಕೊಲ್ಲುವುದು ಬೇಡ. ಹುಲಿಮರಿಗಳನ್ನು ಪಶುಪಾಲಕ ತನ್ನ ರೊಪ್ಪದಲ್ಲಿ ರಕ್ಷಣೆ ಮಾಡಬೇಕು, ಹಸುಗಳು ಹುಲ್ಲುಗಾವಲಿನಲ್ಲಿ ಮೇಯುವಾಗ ಬೇರಾವುದೇ ಹುಲಿಗಳು ಬಂದು ಬೇಟೆಯಾಡದಂತೆ ಹುಲಿ ಕಾವಲಿದ್ದು ಹಸುಗಳನ್ನು ರಕ್ಷಿಸಬೇಕು. ಹುಲಿ ಮತ್ತು ಮನುಷ್ಯ ಇಬ್ಬರೂ ಈ ಒಪ್ಪಂದಕ್ಕೆ ಒಳಪಟ್ಟು ಒಂದು ವರ್ಷ ಪಾಲಿಸಿದರು. ಹುಲಿ ಹಸುಗಳ ಬದಲು ಬೇರೆ ಪ್ರಾಣಿಗಳನ್ನು ಬೇಟೆಯಾಡಿ ಹೊಟ್ಟೆ ತುಂಬಿಸಿಕೊಳ್ಳುತ್ತಿತ್ತು. ಕಾಡಿನ ಬೇರೆ ಹುಲಿಗಳು ಹಸುಗಳನ್ನು ಕೊಲ್ಲದಂತೆ ಕಾವಲು ಕಾಯುತ್ತಿತ್ತು. ಸಂಜೆಯಾದ ನಂತರ ಪಶುಪಾಲಕನ